**ಸಾಕ್ಷಿಗೆ ದಿನಾಂಕಃ 19.11.2025 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕೆ.ಎಸ್.ಎಸ್. ವಕೀಲರಿಂದಃ**

ನನಗೆ ಸಾಕ್ಷಿಯು ನುಡಿಯಲು ನ್ಯಾಯಾಲಯದಿಂದ ನೋಟಿಸು ಬಂದಿರುವುದಿಲ್ಲ. ಸಾಕ್ಷಿ ನುಡಿಯಲು ನನಗೆ ವಾದಿಯು ಕೇಳಿಕೊಂಡಿರುತ್ತಾರೆ. ವಾದಿಯು ನನಗೆ ಸುಮಾರು 15 ದಿನಗಳ ಕೆಳಗೆ ಸಾಕ್ಷಿ ನುಡಿಯಲು ಕೇಳಿಕೊಂಡಿರುತ್ತಾರೆ. ನನಗೆ ಸುಮಾರು 2 ರಿಂದ 3 ತಿಂಗಳ ಹಿಂದೆ ವಾದಿಯು ಸಾಕ್ಷಿ ನುಡಿಯಲು ಕರೆದಿದ್ದರು. ವಾದಿಯು ಈ ದಾವೆಯನ್ನು ಭಾಗಾಂಶ ಕೋರಿ ಸಲ್ಲಿಸಿರುತ್ತಾರೆ. ದಾವಾ ಸ್ವತ್ತುಗಳ ಬಗ್ಗೆ ನನಗೆ ಗೊತ್ತು. ವಾದಿ ಮತ್ತು ಪ್ರತಿವಾದಿಯ ಕುಟುಂಬದವರ ಪರಿಚಯ ನನಗೆ ಗೊತ್ತು. ಮಲ್ಲಪ್ಪನವರಿಗೆ 2 ಗಂಡು ಮತ್ತು ಒಬ್ಬ ಹೆಣ್ಣು ಮಗಳು. ಹೆಣ್ಣುಮಗಳು ಪ್ರಭಾಮಣಿ ಮದುವೆಯಾಗಿ ಗಂಡನ ಮನೆಯಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಮಲ್ಲಪ್ಪನವರು ಬದುಕಿದ್ದಾಗ ಮೊದಲು ಮಾದಾಪುರ ಗ್ರಾಮದಲ್ಲಿ ವಾಸವಿದ್ದು ನಂತರ ದೊಡ್ಡನಹುಂಡಿ ಗ್ರಾಮದಲ್ಲಿ ವಾಸವಿದ್ದರು. ಪ್ರತಿವಾದಿಯು ದೊಡ್ಡನಹುಂಡಿ ಗ್ರಾಮದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳ ತಾಯಿ ಬಸಮ್ಮಣ್ಣಿ ಜೀವಂತ ಇರುತ್ತಾರೆ ಎಂದರೆ ಸರಿ. ಅವರು ಪ್ರತಿವಾದಿಯ ಜೊತೆ ವಾಸವಿರುತ್ತಾರೆ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಗಳನ್ನು ಹೊರತುಪಡಿಸಿ ಬೇರೆಯವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಲ್ಲಪ್ಪನವರ ಅಂತ್ಯಕ್ರಿಯೆಯನ್ನು ದೊಡ್ಡನಹುಂಡಿ ಗ್ರಾಮದಲ್ಲಿ ಮಾಡಿರುತ್ತಾರೆ ಎಂದರೆ ಸರಿ.

ಮಲ್ಲಪ್ಪನವರಿಗೆ ನಿ.ಪಿ.6 ರಲ್ಲಿ ನಮೂದು ಮಾಡಿರುವ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದಿರುತ್ತವೆ. ಮಲ್ಲಪ್ಪನವರ ಭಾಗಕ್ಕೆ ಬಂದ ಸ್ವತ್ತುಗಳನ್ನು ಪ್ರತಿವಾದಿ ಸಾಗುವಳಿ ಮಾಡುತ್ತಿದ್ದರು. ವಿಭಾಗ ಮಾಡಲು ನನ್ನನ್ನು ವಾದಿ ಮತ್ತು ಪ್ರತಿವಾದಿಗಳು ಮತ್ತು ಅವರ ತಂದೆ ಕರೆದಿದ್ದರು. 1 ಎಕರೆ 18 ಗುಂಟೆಯ ಪೈಕಿ ಇಬ್ಬರಿಗೂ ಅರ್ಧ ಭಾಗವನ್ನು ನಾವು ಮಾಡಿದ್ದು, ಅದರ ಸರ್ವೆ ನಂ. 351 ಮತ್ತು 352. ಈ ಸ್ವತ್ತುಗಳನ್ನು ಹೊರತುಪಡಿಸಿ ಬೇರೆ ಸ್ವತ್ತುಗಳ ಬಗ್ಗೆ ನಮೂದು ಮಾಡಿರುವುದಿಲ್ಲ. ಸರ್ವೆ ನಂ.351 ಮತ್ತು 352 ರಲ್ಲಿ 30 ಗುಂಟೆಯನ್ನು ಮಲ್ಲಪ್ಪನವವರಿಗೆ ಅಜ್ಜುಪಾಲಾಗಿ ಬಿಟ್ಟಿದ್ದೇವು. ಸದರಿ 30 ಗುಂಟೆಯನ್ನು ಪ್ರತಿವಾದಿ ಸಾಗುವಳಿ ಮಾಡುತ್ತಿದ್ದರು. ಮೇಲೆ ಹೇಳಿದ ಸರ್ವೆ ನಂಬರ್ ಗಳನ್ನು ಹೊರತುಪಡಿಸಿ ಬೇರೆ ಸ್ವತ್ತುಗಳನ್ನು ವಿಭಾಗ ಮಾಡಿರುವುದಿಲ್ಲ. ವಿಭಾಗದ ಬಗ್ಗೆ ಮಾತುಕತೆಯನ್ನು ಸಂಜೆ 6.00 ಗಂಟೆಯಿಂದ 7.ಗಂಟೆಯವರೆಗೆ ಮಲ್ಲಪ್ಪನವರ ಮನೆಯಲ್ಲಿ ಮಾಡಿರುತ್ತೇವೆ. ದಿ.06.06.2007 ರಂದು

ವಿಭಾಗದ ಮಾತುಕತೆ ಮಾಡಿರುತ್ತೇವೆ. ಪ್ರಮಾಣ ಪತ್ರವನ್ನು ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ವಿಭಾಗ ಪತ್ರದಲ್ಲಿ ಮೇಲೆ ಹೇಳಿರುವ ವಿಚಾರವನ್ನು ಹೊರತುಪಡಿಸಿ ಉಳಿದ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನಿ.ಪಿ.6 ನ್ನು ನಾನೇ ಬರೆಸಿರುತ್ತೇನೆ. ಅದನ್ನು ರವೀಂದ್ರ ಎನ್ನುವ ಪತ್ರಬರಹಗಾರರಿಂದ ಬರೆಸಿರುತ್ತೇವೆ. ಸದರಿಯವರಿಗೆ ಟಿ.ನರಸೀಪುರದಲ್ಲಿ ಕಛೇರಿ ಇರುವುದಿಲ್ಲ ಎಂದರೆ ಸಾಕ್ಷಿಯು ಬೇರೆಯವ ಕಛೇರಿಯಲ್ಲಿ ಬರೆದಿರುತ್ತಾರೆ ಎಂದು ನುಡಿದಿರುತ್ತಾರೆ. ಅದು ಯಾರ ಕಛೇರಿ ಎಂದು ನನಗೆ ಗೊತ್ತಿರುವುದಿಲ್ಲ. ಆರ್.ಟಿ.ಸಿ.ಯನ್ನು ಹೊರತುಪಡಿಸಿ, ಬೇರೆ ದಾಖಲೆಗಳನ್ನು ನೋಡಿರುವುದಿಲ್ಲ. ಛಾಪಾ ಕಾಗದವನ್ನು ಪ್ರತಿವಾದಿ ತಂದಿರುತ್ತಾರೆ. ಅದನ್ನು ತರಲು ನಾನು ಹೋಗಿರುವುದಿಲ್ಲ. ಛಾಪಾ ಕಾಗದವನ್ನು ಪ್ರತಿವಾದಿ ತಂದಿರುವುದಿಲ್ಲ ಎಂದರೆ ಸರಿಯಲ್ಲ.

ಆರ್.ಟಿ.ಸಿ.ಯಲ್ಲಿ ಚೆಕ್ಕುಬಂದಿ ನಮೂದು ಇರುವುದಿಲ್ಲ ಎಂದರೆ ಸರಿ. ಚೆಕ್ಕುಬಂದಿಯನ್ನು ವಾದಿ ಮತ್ತು ಪ್ರತಿವಾದಿ ಹೇಳಿರುತ್ತಾರೆ. ಮಲ್ಲಪ್ಪನವರು ಅವಿದ್ಯಾವಂತರು ಎಂದರೆ ಸರಿ. ನಿ.ಪಿ.6 ಕ್ಕೆ ಎಲ್ಲರೂ ಪತ್ರಬರೆದ ಜಾಗದಲ್ಲಿ ಮಾಡಿರುತ್ತಾರೆ. ಮಲ್ಲಪ್ಪನವರ ಮಗಳಿಗೆ ಸದರಿ ಪತ್ರದಲ್ಲಿ ಭಾಗಾಂಶವನ್ನು ನೀಡಿರುವುದಿಲ್ಲ ಆದರೆ ಅವರ ತಾಯಿಗೆ ಬಿಟ್ಟಿದ್ದ 13 ಗುಂಟೆಯನ್ನು ಮಗಳಿಗೆ ಬಿಟ್ಟಿರುತ್ತಾರೆ. ನಿ.ಪಿ.6 ಕ್ಕೆ ಪ್ರಭಾಮಣಿ ರವರ ಸಹಿಯನ್ನು ಪಡೆದಿರುವುದಿಲ್ಲ. ಮಲ್ಲಪ್ಪನವರು ತೀರಿಕೊಂಡ ಮೇಲೆ ವಾದಿಯು ನನ್ನ ಬಳಿ ಬಂದು ತಂದೆಗೆ ಬಿಟ್ಟಿದ್ದ ಸ್ವತ್ತಿನಲ್ಲಿ ಭಾಗಾಂಶ ಕೊಡಿಸಿ ಎಂದು ಕೇಳಿರುವುದಿಲ್ಲ ಆದರೆ ಈ ದಾವೆಯನ್ನು ಸಲ್ಲಿಸಿರುತ್ತಾರೆ. ನಿ.ಪಿ.6 ನ್ನು ವಾದಿಯ ಜೊತೆ ಶಾಮೀಲಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಲ್ಲಪ್ಪನವರು ಹಾಗೂ ವಾದಿ ಮತ್ತು ಪ್ರತಿವಾದಿಯ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಹಾಗೂ ವಾದಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**